**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇಂಡಿ.**

**ಸಿ.ಸಿ.ನಂ.22/2020**

**ಸಿ.ಡಬ್ಲ್ಯೂ-11**

**ಪಿ.ಡಬ್ಲ್ಯೂ-02**

| | |
|---|---|
| ಸಾಕ್ಷಿಯ ಹೆಸರು | : ಪಂಚಾಕ್ಷರಿ ಅರವತ್ತಿ |
| ತಂದೆ/ಗಂಡನ ಹೆಸರು | : ಅರ್ಜುನ |
| ವಯಸ್ಸು | : 56 ವರ್ಷ |
| ಉದ್ಯೋಗ | : ಎ.ಎಸ್.ಐ. |
| ವಾಸಸ್ಥಳ | : ಇಂಡಿ ನಗರ ಪೊಲೀಸ ಠಾಣೆ |

**ದಿನಾಂಕ:22-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದಃ**

ನಾನು ದಿ: 11.06.2018 ರಿಂದ 22.01.2020 ರವರೆಗೆ ಮುಖ್ಯ ಪೇದೆ ಅಂತಾ ಝಳಕಿ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ27.10.2018 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಪಂಚನಾಮೆ, ಮುದ್ದೆಮಾಲು ಮತ್ತು ಆರೋಪಿಯೊಂದಿಗೆ ಹಾಜರಾಗಿ ಸರ್ಕಾರದ ಪರವಾಗಿ ದೂರನ್ನು ನೀಡಿರುತ್ತಾರೆ. ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನಾ ನಂ.144/2018 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವ.ವನ್ನು ಕಳುಹಿಸಿಕೊಟ್ಟಿರುತ್ತೇನೆ. ಆರೋಪಿಯನ್ನು ನ್ಯಾಯಾಂಗಬಂಧನದ ಕುರಿತು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಚಾಸಾ 4 ರಿಂದ 9 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ರಾ.ಪ.ಗಾಗಿ ದಿಃ17.11.2018 ರಂದು ಠಾಣಾ ಸಿಬ್ಬಂದಿ ಕಡೆಯಿಂದ ಬೆಳಗಾವಿ ರಾ.ಪ್ರಯೋಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿಃ20.05.2019 ರಂದು ರಾ.ಪ. ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ಉಳಿದ ಮುದ್ದೆಮಾಲುಗಳನ್ನು ಅಬಕಾರಿ ಇಲಾಖೆಗೆ ವರ್ಗಾಯಿಸಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು, ಸಾಕ್ಷಿಯು ಪ್ರ.ವ.ವ.ವನ್ನು ನೋಡಿ

ಗುರುತಿಸಿದ್ದು ಅದನ್ನು ನಿ.ಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು, ಸಾಕ್ಷಿಯು ರಾ.ಪ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು, ಸಾಕ್ಷಿಯು ಅಬಕಾರಿ ಇಲಾಖೆಗೆ ಮಾಡಿದ ನಿವೇದನೆ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.4 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ಟೆಟ್ರಾ ಪಾಕೆಟಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಮತ್ತು 2 ಎಂದು ಹಾಗೂ ನ್ಯಾಯಾಲಯದ ಮುಂದೆ ಇರುವ 1 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

2 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ 2 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ವಿವಾದ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ಚಾಸಾ 1 ರವರು 2 ಟಂಟಂ ನಂ.KA-28/A-8106 ಮತ್ತು MH-23/X-8669 ಇತ್ತು ಎಂದು ನನ್ನ ಮುಂದೆ ಮರುಹೇಳಿಕೆಯನ್ನು ನೀಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎಮ್.ಸಿ.ಬಿ.ವಕೀಲರಿಂದಃ**

ಚಾಸಾ 1 ರವರು ರಾತ್ರಿ 11.45 ಗಂಟೆಗೆ ದೂರನ್ನು ನೀಡಿರುತ್ತಾರೆ. ಚಾಸಾ 1 ರವರು ಹೇಳಿದಂತೆ ದೂರನ್ನು PC 1570 ರವರು ಟೈಪ್ ಮಾಡಿರುತ್ತಾರೆ ಆದರೆ ದಸ್ತೂರ ಎಂದು ಅವರು ಸಹಿ ಮಾಡಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ಚಾಸಾ 8 ಮತ್ತು 9 ರವರ ಹೇಳಿಕೆಗಳನ್ನು ಕೇಸಿಗೆ ಅನುಕೂಲವಾಗಲಿ ಎಂದು ನಾನೇ ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ಮತ್ತು 4 ರಿಂದ 7 ರವರು ನಮ್ಮ ಸಿಬ್ಬಂದಿಗಳು ಇರುತ್ತಾರೆ ಎಂದರೆ ಸರಿ. ಟಂಟಂ ವಾಹನದ ನಂಬರನ್ನು ನನಗೆ ಹೇಳಲು ಬರುತ್ತದೆ. ಟಂಟಂ ವಾಹನ ಯಾರಿಗೆ ಸೇರಿರುತ್ತದೆ ಎಂದು ವಿಚಾರಣೆ ಮಾಡಿರುತ್ತೇನೆ. ಸದರಿ ಟಂಟಂ ವಾಹನಗಳು ಅನ್ವರ ಮಹಮ್ಮದ ಮುಲ್ಲಾ ಮತ್ತು ರೇಣುಕರಾಜ ತಳವಾರ ಇವರಿಗೆ ಸೇರಿರುತ್ತವೆ. ಸದರಿಯವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಹೇಳಿಕೆಗಳನ್ನು ಅಂತಿಮ ವರದಿಯಲ್ಲಿ ಸೇರಿಸಿರುತ್ತೇನೆ. ಕಂಟ್ರಿ ಸರಾಯಿಯನ್ನು ಎಲ್ಲಿಂದ



ತಂದಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ನಾನು ಚಾಸಾ 1 ರವರ ಮಾತು ಕೇಳಿ ಖೊಟ್ಟಿಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೆ.ಕೆ. ಸರಿ ಇದೆ**

**ಸಹಿ/-**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.**